

ಅಕ್ಕಿ ಮುಡಿಗಳನ್ನು ಸಂಗ್ರಹಿಸಿ ಇಡುತ್ತಿದ್ದೆವು. ಈ ಕೋಣೆಯ ಮೇಲ್ಭಾಗದಲ್ಲಿ ಹಳೆಯುಪ್ಪರಿಗೆ ಇತ್ತು. ಕೋಣೆಗೆ ಒಂದೇ ಒಂದು ಅತಿ ಸಣ್ಣ ಕಿಟಕಿ. ಡರ್ರ್ ಬರ್ರ್ ಎಂದು ಸದ್ದು ಮಾಡುವ ಮರದ ದಪ್ಪ ಬಾಗಿಲು. ಡಬ್ಬಗಳಲ್ಲಿ ಹಪ್ಪಳದ ಕಟ್ಟುಗಳು. ಮನೆಯಲ್ಲೇ ಮಾಡಿಸಿದ ತೆಂಗಿನೆಣ್ಣೆ, ಹತ್ತಿರದ ಕಬ್ಬಿನಾಲೆಯಿಂದ (ಆಲೆಮನೆ) ಕೊಂಡುಕೊಂಡ ಬೆಲ್ಲ, ಹಿಟ್ಟುಗಳು, ಉಂಡೆ, ಚಕ್ಕುಲಿ (ಮಾಡಿದ ಸಮಯದಲ್ಲಿ) ಮುಂತಾದುವನ್ನೆಲ್ಲ ಇಡುತ್ತಿದ್ದರು. ಮನೆಯ ಎರಡು ಮುಖ್ಯ ಪೆಟ್ಟಿಗೆಗಳೂ ಇಲ್ಲೇ ಇದ್ದವು.

ದೊಡ್ಡ ಪೆಟ್ಟಿಗೆಯಲ್ಲಿ ಮನೆಗೆ ಸಂಬಂಧಿಸಿದ ಎಲ್ಲಾ ರೆಕಾರ್ಡುಗಳು, ಮುಖ್ಯ ದಾಖಲೆಗಳೆಲ್ಲ ಇದ್ದವು. ಈ ಆಚೆ ಒಳ (ಒಳಭಾಗದ ಕೋಣೆ) ನನಗೆ ಅತ್ಯಂತ ಆಪ್ತವಾಗಿದ್ದ ಜಾಗ. ಮಳೆಗಾಲ, ಚಳಿಗಾಲದಲ್ಲಿ ಬೆಚ್ಚಗೆ ಅಲ್ಲಿ ಹೋಗಿ ಕುಳಿತುಕೊಂಡು ಪುಟ್ಟ ಕಿಟಕಿಯಿಂದ ಇಣುಕಿ ಹಿಂದಿನ ಮನೆಯವರ ಕೋಳಿಗಳು, ದನದ ಕೊಟ್ಟಿಗೆ, ಮಾವು ಹಲಸಿನ ಮರಗಳನ್ನು ನೋಡುತ್ತಿದ್ದೆ. ಚಳಿಯ ದಿನಗಳಲ್ಲಿ ಹೊಗೆ ಕಾರುವ ಚಿಮಣಿದೀಪ ಇಟ್ಟುಕೊಂಡು ಓದುತ್ತಿದ್ದುದೂ ಇಲ್ಲೇ! ಒಮ್ಮೊಮ್ಮೆ ತೀವ್ರ ಚಳಿಯ ರಾತ್ರಿಗಳಲ್ಲಿ ಅಕ್ಕಂದಿರೊಂದಿಗೆ ಇದೇ ಆಚೆ ಒಳದಲ್ಲಿ ಮಲಗುತ್ತಿದ್ದುದೂ ಉಂಟು! ಆಚೆ ಒಳದಲ್ಲಿ ಒಂದು ಅದ್ಭುತ ಹಿತ ಆವರಿಸಿಕೊಳ್ಳುತ್ತಿತ್ತು. ನೆಂಟರು ಬಂದಾಗ ಕೆಲವು ಸಲ ಚಾವಡಿ, ಜಗಲಿಗಳಿಂದ ಮರೆಯಾಗಿ ಆಚೆ ಒಳದಲ್ಲಿ ಬಂದು ಏಕಾಂತದಲ್ಲಿ ಕುಳಿತುಕೊಳ್ಳುತ್ತಿದ್ದುದಿದೆ. ಮನಸಿನ ಒಳಕೋಣೆಗೆ ಇಳಿಯಬೇಕೆಂದಾಗೆಲ್ಲ ಈ ಜಾಗ ನೆರವಿಗೆ ಬರುತ್ತಿತ್ತು! ಇನ್ನೊಂದು ಅತಿ ಸಣ್ಣ ಸ್ಟೋರ್ ರೂಂ ಈ ಮನೆಯಲ್ಲಿದ್ದದ್ದು ಉಪ್ಪರಿಗೆ ಮೆಟ್ಟಿಲುಗಳ ಕೆಳಗೆ ಸಿಕ್ಕಿದ ಸಣ್ಣ ಜಾಗದಲ್ಲಿ ನಿರ್ಮಿತವಾಗಿತ್ತು.

ಹಳೆಯ ಪಾತ್ರೆ ಪಗಡಗಳು ತುಂಬಿಕೊಂಡಿದ್ದ ಅದಕ್ಕೆ ಸಣ್ಣ ಬಾಗಿಲುಗಳಿದ್ದವು. ಅಕ್ಕಳೆಗಳು (ಜಿರಳೆ) ಧಾರಾಳವಾಗಿ ವಾಸಿಸುತ್ತಿದ್ದವಾದರೂ ಬಾಲ್ಯದಲ್ಲಿ ಆ ಕೋಣೆ ಬಹಳ ಇಷ್ಟವಾಗಿತ್ತು. ಒಳಗೆ ಹೋಗಲಾಗದಿದ್ದರೂ ಆಗಾಗ ಹೊರಗೆ ಕುಳಿತು ಅದರ ಅಂತರಾಳವನ್ನು ವೀಕ್ಷಿಸುತ್ತಿದ್ದೆ. ನಮ್ಮೂರಿಗೆ ಚಂದ್ರನ್ ಎಂಬ ಕಳ್ಳ ಬಂದ ಸುದ್ದಿ ಒಂದು ರಾತ್ರಿ ಹರಡಿ ನಾವೆಲ್ಲರೂ ಮರಗಟ್ಟಿ ಕುಳಿತಿದ್ದಾಗ ಚಿನ್ನವನ್ನು ಪೆಟ್ಟಿಗೆಯಿಂದ ತೆಗೆದುಕೊಂಡು ಬಂದು ಇದೇ ಸ್ಟೋರ್ ರೂಮಿನ ಹಳೆಯ ಪಾತ್ರೆಗಳ ಮಧ್ಯದಲ್ಲಿ ಅಮ್ಮ ಬಚ್ಚಿಟ್ಟಿದ್ದರು. ಸುಮಾರು ಒಂದು ತಿಂಗಳವರೆಗೂ ಆ ಚಿನ್ನ ಅಲ್ಲೇ ಇತ್ತು. ತನ್ನ ಭೀಭತ್ಸ ಕೊಲೆಗಳಿಗೆ ಪ್ರಖ್ಯಾತನಾಗಿದ್ದ ಚಂದ್ರನ್ ನಮ್ಮೂರಿಗೆ ಬರಲಿಲ್ಲವಾದ್ದರಿಂದ ಕೊನೆಗೆ ಚಿನ್ನ ಭದ್ರವಾಗಿ ತನ್ನ ಮೂಲಸ್ಥಾನವನ್ನು ಸೇರಿತು!

ಇನ್ನೊಂದು ಇಷ್ಟದ ಸ್ಟೋರ್ ರೂಂ ಎಂದರೆ ಚಾಮರಾಜನಗರದಲ್ಲಿ ನಾವಿದ್ದ ಅತಿ ಸಣ್ಣ ಬಾಡಿಗೆ